## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2024-25ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-178(1) ರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 100 ಸಂಖ್ಯಾಬಲದ ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕಿಯರ 150 ಹೊಸ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಕುರಿತು.

**ಓದಲಾಗಿದೆ:**

1. ಆಯವ್ಯಯ ಭಾಷಣ ಕಂಡಿಕೆ-178(1).
2. ಅಯವ್ಯಯ ಸಲಹಾ ಟಿಪ್ಪಣಿ ಸಂಖ್ಯೆ: ಆಇ 171 ವೆಚ್ಚ-3/2024, ದಿನಾಂಕ: 23.04.2024.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಏಕಕಡತ ಪ್ರಸ್ತಾವನೆ ಸಂಖ್ಯೆ: BCWD-12015/3/2024-BCWD_HOSTEL-BCWD.

******

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆಯವ್ಯಯ ಘೋಷಣೆ ಕಂಡಿಕೆ-178(1) ರಲ್ಲಿ

**"100 ಸಂಖ್ಯಾಬಲದ ಮೆಟ್ರಿಕ್ ನಂತರದ 75 ಬಾಲಕ ಮತ್ತು 75 ಬಾಲಕಿಯರ ವಸತಿ ನಿಲಯಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ಪ್ರಾರಂಭಿಸಲಾಗುವುದು"** ಎಂದು ಘೋಷಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2) ರ ಆರ್ಥಿಕ ಇಲಾಖೆಯ ಸಲಹಾ ಟಿಪ್ಪಣಿಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳ ಪ್ರಾರಂಭ ಮತ್ತು ನಿರ್ವಹಣೆ ಲೆಕ್ಕಶೀರ್ಷಿಕೆ: 2225-03-277-2-53(059) ರಡಿ ರೂ.4500.00 ಲಕ್ಷಗಳನ್ನು 150 ಹೊಸ ವಿದ್ಯಾರ್ಥಿನಿಲಯಗಳ ಪ್ರಾರಂಭಕ್ಕೆ/ನಿರ್ವಹಣೆಗೆ ಒದಗಿಸಲಾಗಿದ್ದು, ಅದರಂತೆ ಕ್ರಮ ವಹಿಸಲು ತಿಳಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಏಕಕಡತ ಪ್ರಸ್ತಾವನೆಯಲ್ಲಿ ಹಿಂದುಳಿದ ವರ್ಗಗಗಳ ಕಲ್ಯಾಣ ಇಲಾಖೆಯಲ್ಲಿ ಪ್ರಸ್ತುತ 1277 ಮೆಟ್ರಿಕ್-ಪೂರ್ವ ಮತ್ತು 1169 ಮೆಟ್ರಿಕ್-ನಂತರದ ಹೀಗೆ ಒಟ್ಟು 2446 ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಒಟ್ಟಾರೆ 228736 ಮಂಜೂರಾತಿ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ರಾಜ್ಯದಲ್ಲಿ ಹೆಚ್ಚಿನ ಶಿಕ್ಷಣ ಸಂಸ್ಥೆಗಳನ್ನು ಹೊಂದಿರುವ ಹಾಗೂ ವಿದ್ಯಾರ್ಥಿನಿಲಯಗಳಿಗೆ ಅತಿ ಹೆಚ್ಚು ಬೇಡಿಕೆ ಇರುವ ಜಿಲ್ಲೆಗಳಲ್ಲಿ ತಲಾ 100 ಸಂಖ್ಯಾಬಲದ 75 ಮೆಟ್ರಿಕ್ ನಂತರದ ಬಾಲಕರ ಹಾಗೂ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಅವಶ್ಯಕತೆಯಿರುತ್ತದೆ ಎಂಬುದಾಗಿ ಅಭಿಪ್ರಾಯಿಸಿ 100 ಸಂಖ್ಯಾಬಲದ ಒಂದು ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯದ ನಿರ್ವಹಣೆಗೆ ವಾರ್ಷಿಕವಾಗಿ ರೂ.55.90 ಲಕ್ಷಗಳು (ಆವರ್ತಕ ಮತ್ತು ಅನಾವರ್ತಕ ವೆಚ್ಚಗಳನ್ನು ಒಳಗೊಂಡಂತೆ) ಹಾಗೂ 100 ಸಂಖ್ಯಾಬಲದ ಒಂದು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯದ ನಿರ್ವಹಣೆಗೆ ವಾರ್ಷಿಕವಾಗಿ

2...

ರೂ.53.15 ಲಕ್ಷಗಳ (ಆವರ್ತಕ ಮತ್ತು ಅನಾವರ್ತಕ ವೆಚ್ಚಗಳನ್ನು ಒಳಗೊಂಡಂತೆ) ಅನುದಾನದ ಅವಶ್ಯಕತೆಯಿದ್ದು, ಒಟ್ಟಾರೆ 75 ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯಗಳ ನಿರ್ವಹಣೆಗೆ ರೂ.4192.50 ಲಕ್ಷಗಳು ಮತ್ತು 75 ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯಗಳ ನಿರ್ವಹಣೆಗೆ ರೂ.3986.25 ಲಕ್ಷಗಳು ಹೀಗೆ ಒಟ್ಟು 100 ಸಂಖ್ಯಾಬಲದ 150 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆಗೆ ವಾರ್ಷಿಕವಾಗಿ ರೂ.8178.85 ಲಕ್ಷಗಳ ಅನುದಾನದ ಅವಶ್ಯಕತೆಯಿರುತ್ತದೆ ಎಂಬುದಾಗಿ ತಿಳಿಸಿ ಸದರಿ ವಿದ್ಯಾರ್ಥಿ ನಿಲಯಗಳಿಗೆ ಅಗತ್ಯವಿರುವ 975 ಹುದ್ದೆಗಳ ಸೃಜನೆಯೊಂದಿಗೆ 100 ಸಂಖ್ಯಾಬಲದ 150 ಮೆಟ್ರಿಕ್ ನಂತರದ ಬಾಲಕ ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 390 ಬಿಎಂಎಸ್ 2024,**
**ಬೆಂಗಳೂರು, ದಿನಾಂಕ:- 18.06.2024.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿನ ಬೇಡಿಕೆಯಂತೆ **100 ಸಂಖ್ಯಾಬಲದ** 75 ಮೆಟ್ರಿಕ್ ನಂತರದ ಬಾಲಕಿಯರ ಹಾಗೂ 75 ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯಗಳನ್ನು ಸದರಿ ವಿದ್ಯಾರ್ಥಿ ನಿಲಯಗಳಿಗೆ ಅಗತ್ಯವಿರುವ **825 ಹುದ್ದೆಗಳ ಸೃಜನೆಯೊಂದಿಗೆ** ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿರುವ ಜಿಲ್ಲೆಗಳಲ್ಲಿ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಸರ್ಕಾರದ ಮಂಜೂರಾತಿ ನೀಡಿ ಆದೇಶಿಸಿದೆ.

| ಕ್ರ.ಸಂ | ಜಿಲ್ಲೆಯ ಹೆಸರು | ಬಾಲಕರ ವಿದ್ಯಾರ್ಥಿನಿಲಯ | ಬಾಲಕಿಯರ ವಿದ್ಯಾರ್ಥಿನಿಲಯ | ಒಟ್ಟು |
|---|---|---|---|---|
| ಜಿಲ್ಲಾವಾರು ಮಂಜೂರು ಮಾಡಿರುವ 150 ವಿದ್ಯಾರ್ಥಿನಿಲಯಗಳ ವಿವರ | | | | |
| 1 | ಬಾಗಲಕೋಟೆ | 4 | 4 | 8 |
| 2 | ಬೆಂಗಳೂರು ಗ್ರಾಮಾಂತರ | 1 | 1 | 2 |
| 3 | ಬೆಂಗಳೂರು ನಗರ | 7 | 7 | 14 |
| 4 | ಬೆಳಗಾವಿ | 4 | 4 | 8 |
| 5 | ಬಳ್ಳಾರಿ | 1 | 2 | 3 |
| 6 | ಬೀದರ್ | 1 | 1 | 2 |

3...

| ಕ್ರ.ಸಂ | ಜಿಲ್ಲೆಯ ಹೆಸರು | ಬಾಲಕರ ವಿದ್ಯಾರ್ಥಿನಿಲಯ | ಬಾಲಕಿಯರ ವಿದ್ಯಾರ್ಥಿನಿಲಯ | ಒಟ್ಟು |
|---|---|---|---|---|
| 7 | ಚಾಮರಾಜನಗರ | 0 | 1 | 1 |
| 8 | ಚಿಕ್ಕಬಳ್ಳಾಪುರ | 1 | 1 | 2 |
| 9 | ಚಿಕ್ಕಮಗಳೂರು | 1 | 1 | 2 |
| 10 | ಚಿತ್ರದುರ್ಗ | 1 | 1 | 2 |
| 11 | ದಕ್ಷಿಣ ಕನ್ನಡ | 2 | 2 | 4 |
| 12 | ದಾವಣಗೆರೆ | 4 | 4 | 8 |
| 13 | ಧಾರವಾಡ | 8 | 7 | 15 |
| 14 | ಗದಗ | 1 | 1 | 2 |
| 15 | ಹಾಸನ | 2 | 2 | 4 |
| 16 | ಹಾವೇರಿ | 2 | 2 | 4 |
| 17 | ಕಲಬುರ್ಗಿ | 4 | 4 | 8 |
| 18 | ಕೊಡಗು | 1 | 1 | 2 |
| 19 | ಕೋಲಾರ | 1 | 1 | 2 |
| 20 | ಕೊಪ್ಪಳ | 5 | 5 | 10 |
| 21 | ಮಂಡ್ಯ | 2 | 2 | 4 |
| 22 | ಮೈಸೂರು | 7 | 7 | 14 |
| 23 | ರಾಯಚೂರು | 2 | 2 | 4 |
| 24 | ರಾಮನಗರ | 2 | 2 | 4 |
| 25 | ಶಿವಮೊಗ್ಗ | 3 | 2 | 5 |
| 26 | ತುಮಕೂರು | 3 | 3 | 6 |
| 27 | ಉಡುಪಿ | 1 | 1 | 2 |
| 28 | ಉತ್ತರ ಕನ್ನಡ | 1 | 1 | 2 |
| 29 | ವಿಜಯಪುರ | 1 | 1 | 2 |
| 30 | ಯಾದಗಿರಿ | 1 | 1 | 2 |
| 31 | ವಿಜಯನಗರ | 1 | 1 | 2 |
| | **ಒಟ್ಟು** | **75** | **75** | **150** |

ಮುಂದುವರೆದು, 100 ಸಂಖ್ಯಾಬಲದ 75 ಮೆಟ್ರಿಕ್ ನಂತರದ ಬಾಲಕಿಯರ ಹಾಗೂ 75 ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯಗಳಿಗೆ ಈ ಕೆಳಕಂಡ ಹುದ್ದೆಗಳನ್ನು ಮಂಜೂರು ಮಾಡಿ ಆದೇಶಿಸಿದೆ.

| **ಹುದ್ದೆಯ ವಿವರ** | **ಒಂದು ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಅವಶ್ಯವಿರುವ ಹುದ್ದೆಗಳ ಸಂಖ್ಯೆ** | **75 ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಸೃಜಿಸಿದ =ಹುದ್ದೆಗಳ ಸಂಖ್ಯೆ** | **ಒಂದು ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಅವಶ್ಯವಿರುವ ಹುದ್ದೆಗಳ ಸಂಖ್ಯೆ** | **75 ಬಾಲಕಿಯರ ವಿದ್ಯಾರ್ಥಿ ನಿಲಯಕ್ಕೆ ಸೃಜಿಸಿದ ಹುದ್ದೆಗಳ ಸಂಖ್ಯೆ** | **ಒಟ್ಟು 150 ವಿದ್ಯಾರ್ಥಿ ನಿಲಯಗಳಿಗೆ ಸೃಜಿಸಿದ ಹುದ್ದೆಗಳ ಸಂಖ್ಯೆ** | **ನೇಮಕಾತಿ ವಿಧಾನ** |
|---|---|---|---|---|---|---|
| ನಿಲಯ ಪಾಲಕರು | 1 | 75 | 1 | 75 | 150 | ವೃಂದ ಮತ್ತು ನೇಮಕಾತಿ ನಿಯಮಗ ಳನ್ವಯ |
| ಅಡುಗೆಯವರು | 2 | 150 | 2 | 150 | 300 | ಹೊರಗುತ್ತಿಗೆ ಆಧಾರದ ಮೇಲೆ |
| ಅಡುಗೆ ಸಹಾಯಕರು | 2 | 150 | 2 | 150 | 300 | |
| ರಾತ್ರಿ ಕಾವಲುಗಾರರು (ಬಾಲಕಿಯರ ನಿಲಯಕ್ಕೆ ಮಾತ್ರ) | 0 | 0 | 1 | 75 | 75 | |
| **ಒಟ್ಟು** | **5** | **375** | **6** | **450** | **825** | |

ಹೊಸ ವಿದ್ಯಾರ್ಥಿ ನಿಲಯಗಳ ಪ್ರಾರಂಭ ಹಾಗೂ ನಿರ್ವಹಣೆಗೆ ತಗಲುವ ವೆಚ್ಚವನ್ನು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯಗಳ ಪ್ರಾರಂಭ ಮತ್ತು ನಿರ್ವಹಣೆ ಲೆಕ್ಕಶೀರ್ಷಿಕೆ: 2225-03-277-2-53 ರಡಿ ಒದಗಿಸಿರುವ ರೂ.4500.00 ಲಕ್ಷಗಳ ವೆಚ್ಚಕ್ಕೆ ಸೀಮಿತಗೊಳಿಸಿ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:-ಆಇ 331 ವೆಚ್ಚ-3/2024, ದಿನಾಂಕ:11.05.2024ರ ಸಹಮತಿ ಮತ್ತು ಆಇ 620 ಎಫ್ಆರ್‌ಸಿ 2023, ದಿನಾಂಕ:02.01.2024

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ.ಅಶ್ವತ್ಥ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

**ಇವರಿಗೆ:-**

1. ಪ್ರಧಾನ ಮಹಾಲೇಖಪಾಲರು , (ಎ ಮತ್ತು ಇ), ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
4. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು. (ಆಯುಕ್ತಾಲಯದ ಮುಖಾಂತರ)
5. ಎಲ್ಲಾ ಜಿಲ್ಲೆಯ ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್. (ಆಯುಕ್ತಾಲಯದ ಮುಖಾಂತರ)
6. ಎಲ್ಲಾ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ- (ಆಯುಕ್ತಾಲಯದ ಮುಖಾಂತರ)

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಹಿಂದುಳಿದ ವರ್ಗಗಳ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಸಹಾಯಕರು, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಅಧೀನ ಕಾರ್ಯದರ್ಶಿ-1, (ಸಮನ್ವಯ), ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರು ಇಲಾಖಾ ಜಾಲತಾಣದಲ್ಲಿ ಅಪ್‌ಲೋಡ್ ಮಾಡಲು ಕ್ರಮವಹಿಸುವುದು.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.